ಹಾಸನ ಜಿಲ್ಲೆಯ ಆಲೂರು ನಗರದಲ್ಲಿ ಕಟ್ಟುತ್ತಿರುವ ಆಸ್ಪತ್ರೆ ಕಟ್ಟಡದ ಬಗ್ಗೆ

112 (380) ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಹಾಸನ ಜಿಲ್ಲೆ ಆಲೂರು ನಗರದಲ್ಲಿ ಆಸ್ಪತ್ರೆ ಕಟ್ಟಡ ಕಟ್ಟಲು ಪ್ರಾರಂಭಿಸಲಾಗಿದೆಯೇ?

2) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗಿದೆ?

3) ಅದರ ಅಂದಾಜು ವೆಚ್ಚವೆಷ್ಟು?

4) ಇದುವರೆಗೆ ಆಗಿರುವ ಖರ್ಚು ಎಷ್ಟು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಇನ್ನೂ ಪ್ರಾರಂಭವಾಗಿಲ್ಲ

2) ಉದ್ಭವಿಸುವುದಿಲ್ಲ

3) ರೂ. 46.40 ಲಕ್ಷಗಳು

4) ಯೋಜನೆಯು ನಕ್ಷೆ ತಯಾರಿಸುವ ಹಂತದಲ್ಲಿರುವುದರಿಂದ ಸದ್ಯಕ್ಕೆ ಯಾವುದೇ ವೆಚ್ಚ ಆಗಿರುವುದಿಲ್ಲ.

ಶ್ರೀ ಬಿ. ಬಿ. ಶಿವಪ್ಪ: ಮಾನ್ಯ ಅಧ್ಯಕ್ಷರೇ, ಉತ್ತರ ಸಿಕ್ಕಿದೆ. ಈ ಉತ್ತರ ನೋಡಿದ ನಂತರ ನಾನೊಂದು ರೀತಿ ದಿಗ್ಭ್ರಾಂತನಾಗಿದ್ದೇನೆ.

ಅಧ್ಯಕ್ಷರು : ಏಕೆ?

ಶ್ರೀ ಬಿ. ಬಿ. ಶಿವಪ್ಪ : ನಾನು ಎಲ್ಲಿದ್ದೇನೆ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಆಲೂರಿನ ತಾಲ್ಲೂಕಿನ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂಥ ಒಬ್ಬ ಸದಸ್ಯ. ಆಲೂರು ತಾಲ್ಲೂಕಿನ ಒಂದು ಮುಖ್ಯ ಕೇಂದ್ರ. ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆಗಿದೆ. ಅಲ್ಲಿರುವುದು ಒಂದೇ ಆಸ್ಪತ್ರೆ ನನಗೆ ತಿಳಿದ ಮಟ್ಟಿಗೆ. ಈ ಉತ್ತರ ನೋಡಿದರೆ ನನ್ನ ಪ್ರಶ್ನೆ ತಪ್ಪಾಗಿದೆಯೋ ಉತ್ತರ ತಪ್ಪಾಗಿದೆಯೋ ಗೊತ್ತಾಗುತ್ತಿಲ್ಲ. ಉತ್ತರದಲ್ಲಿ ಏನು ಇದೆ ಎಂದರೆ ಆಸ್ಪತ್ರೆ ಕಟ್ಟಡ ಇನ್ನೂ ಪ್ರಾರಂಭವಾಗಿಲ್ಲ. ಮುಕ್ಕಾಲು ಭಾಗ ತೀರಿದೆ. ಎರಡು ವರ್ಷಗಳಾಯಿತು. ಹಾಗಿದ್ದಲ್ಲಿ ಯಾವುದೂ ಉದ್ಭವಿಸುವುದಿಲ್ಲ. ಅಂದಾಜು 46 ಲಕ್ಷ ರೂಪಾಯಿಗಳು. ಅದು ಸರಿ ಇದೆ. ಯೋಜನೆ ನಕ್ಷೆ ತಯಾರಿಸುವ ಹಂತದಲ್ಲಿರುವುದರಿಂದ ಸದ್ಯಕ್ಕೆ ಯಾವುದೇ ವೆಚ್ಚ ಆಗಿರುವುದಿಲ್ಲ. ಸನ್ಮಾನ್ಯ ಪ್ರಕಾಶ್‌ರವರ ಸುಮಾರು ಎರಡು ವರ್ಷಗಳ ಹಿಂದೆ ಒಂದು ಸಾರಿ ಅಲ್ಲಿಗೆ ಬಂದು ಆ ಕಟ್ಟಡವನ್ನು ನೋಡಿ ಅವರ ಒಪ್ಪಿಗೆಯನ್ನು ಸೂಚಿಸಿ ಹೋಗಿದ್ದಾರೆ. ಇದು ಅದಷ್ಟು ಜಾಗ್ರತೆ ಆಗಬೇಕು. ಚೆನ್ನಾಗಿದೆ. ಒಳ್ಳೆಯ ಕೆಲಸವಾಗುತ್ತಿದೆ ಎಂದು ಹೇಳಿ. ಮೊನ್ನೆ ಉಪಮುಖ್ಯ ಮಂತ್ರಿಗಳ ಜೊತೆಯಲ್ಲಿ ನಮ್ಮ ಜಿಲ್ಲೆಗೆ ಸಮೀಕ್ಷೆಗೆ ಬಂದಾಗ ಆ ಕಟ್ಟಡ ನಿಂತು ಹೋಗಿದೆ. ಕಾರಣ ಗೊತ್ತಿಲ್ಲ. ತಕ್ಷಣ ಅದರ ಕೆಲಸವನ್ನು ಪ್ರಾರಂಭಿಸಬೇಕು ಎಂದು ನಾನು ಕೇಳಿಕೊಂಡಾಗ ಆದೇಶ ಇತ್ತಿದ್ದಾರೆ. ಅದು ಆಗಲಿಲ್ಲ. ಮೊನ್ನೆ ಕೂಡ ನಾನು ಪ್ರಕಾಶ್‌ರವರಲ್ಲಿ ಮಾತನಾಡಿದ್ದೇನೆ. ಏತಕ್ಕೋಸ್ಕರ ಈ ಕಟ್ಟಡವನ್ನು ನಿಲ್ಲಿಸಿದ್ದೀರಿ. ತಕ್ಷಣ ಪ್ರಾರಂಭ ಮಾಡಿ ಎಂದು ಕೇಳುತ್ತಿದ್ದೇನೆ. ಈಗ ಅದನ್ನು ಲ್ಯಾಂಡ್ ಆರ್ಮಿಗೆ ವಹಿಸಿದ್ದೇನೆ. ಸ್ವಲ್ಪ ತಕರಾರು ಇದೆ ಎಂದು ಹೇಳಿದ್ದಾರೆ. ಅಂದ ಮೇಲೆ ಈ ಆಸ್ಪತ್ರೆ ಜಿಲ್ಲಾ ಪರಿಷತ್ ಮತಿಯಿಂದ ಏನು

ಪ್ರಾರಂಭವಾಗಿದೆ, ಅದಲ್ಲದೆ ಮತ್ತೊಂದು ಕಟ್ಟಡವನ್ನು ಇವರೇನಾದರೂ ಕಟ್ಟುತ್ತಿದ್ದಾರೋ ಎನ್ನುವುದು ನನಗೆ ಬೇಕು. ಕಾರಣ, ಒಂದೇ ಆಸ್ಪತ್ರೆ ಇರುವುದು ಅಲ್ಲಿ. ಸರ್ಕಾರಿ ಆಸ್ಪತ್ರೆ ಇರುವುದು ಆ ತಾಲ್ಲೂಕಿನಲ್ಲಿ ಒಂದೇ ಅಂದ ಮೇಲೆ ಉತ್ತರ ಎಷ್ಟು ವಿಚಿತ್ರವಾಗಿದೆ ಎಂದರೆ ನಾನು ಏನು ಹೇಳಬೇಕೋ ಅರ್ಥವಾಗುತ್ತಿಲ್ಲ. ಉದ್ಘವಿಸುವುದೇ ಇಲ್ಲ ಎಂದು ಹೇಳುತ್ತಾರೆ, ಪ್ರಾರಂಭವೇ ಆಗಿಲ್ಲ ಎಂದು ಹೇಳುತ್ತಾರೆ. ಮುಕ್ಕಾಲು ಭಾಗ ಪ್ರಾರಂಭವಾಗಿದೆ.

ಡಾ॥ ಹೆಚ್. ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಹೇಳತಕ್ಕಂಥದ್ದು ಸರಿಯಾಗಿಯೇ ಇದೆ. ಕಾರಣ ನೂರು ಹಾಸಿಗೆಗಿಂತ ಕಡಿಮೆ ಇರುವ ಎಲ್ಲಾ ಆಸ್ಪತ್ರೆಗಳು ನಮ್ಮ ರಾಜ್ಯದಲ್ಲಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರತಕ್ಕಂಥದ್ದು. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಪ್ರಕಾಶ್ ರವರು ಹೋಗಿ ಅದನ್ನು ನೋಡಿ ಕಟ್ಟಡವನ್ನು ಬೇಗ ಮಾಡಬೇಕು ಎಂದು ಹೇಳಿದ್ದಾರೆ. ಹಿಂದೆ ನಡೆಯುತ್ತಿದ್ದ ಜಿಲ್ಲಾ ಪರಿಷತ್ತು ಮತ್ತು ರಾಜ್ಯ ಶೀರ್ಷಿಕೆಯಡಿ ಇರುವ ಆಸ್ಪತ್ರೆಗಳ ಕಟ್ಟಡಗಳನ್ನು ಸ್ಥಗಿತಗೊಳಿಸಿ ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ಮತ್ತೆ ನಾವು ಹಣವನ್ನು ಅದೇ ಆಸ್ಪತ್ರೆಗಳಿಗೆ ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕೆಲಸವನ್ನು ಈ ಯೋಜನೆ ಕೈಗೊಂಡಿರುವುದರಿಂದ ಡೂಪ್ಲಿಕೇಷನ್ ಆಗಬಾರದು ಎಂದು ಹೇಳಿ ಮತ್ತು ಜಿಲ್ಲಾ ಪರಿಷತ್ತು ಮತ್ತು ರಾಜ್ಯಸರ್ಕಾರದ ವತಿಯಿಂದ ಕಟ್ಟಿರತಕ್ಕಂಥ ಆಸ್ಪತ್ರೆಗಳ ವೆಚ್ಚವನ್ನು ರೀ ಇಂಬರ್ಸ್ ಮಾಡಲಿಕ್ಕೆ ಇಲ್ಲಿ ಸಾಧ್ಯವಿರುವುದರಿಂದ ಈ ಒಂದು ಆಸ್ಪತ್ರೆಯನ್ನು ಕೆ. ಹೆಚ್. ಎಸ್. ಟಿ. ಪಿ. ವ್ಯಾಪ್ತಿಯೊಳಗಡೆ ಅಪ್‌ಗ್ರೇಡ್ ಮಾಡಲಿಕ್ಕೆ ಬರುವುದರಿಂದ ಅದಕ್ಕೆ ಆಗುವ ಉಳಿದ ವೆಚ್ಚವನ್ನು ಭರಿಸಿ ಅದನ್ನು ಪೂರ್ಣ ಮಾಡುವುದಕ್ಕೆ.

ಅಧ್ಯಕ್ಷರು : ಅವರ ಪ್ರಶ್ನೆ ಏನೆಂದರೆ ಪ್ರಾರಂಭವಾಗಿಲ್ಲ ಎಂದು ಹೇಳಿದ್ದೀರಿ. ಮುಕ್ಕಾಲು ಭಾಗ ಕೆಲಸವಾಗಿದೆ. ಇನ್ನಾರಿಗಾದರೂ ಇದನ್ನು ಬೇರೆಯವರಿಗೆ ಕೊಟ್ಟಿಬಿಟ್ಟಿರೇನು? ಎಂಬುದು ಪ್ರಶ್ನೆ.

ಡಾ॥ ಹೆಚ್. ಸಿ. ಮಹಾದೇವಪ್ಪ : ಮಾನ್ಯ ಸದಸ್ಯರು ಹೇಳಿದುದ್ದು ಸರಿಯಾಗಿದೆ.

ಅಧ್ಯಕ್ಷರು : ಈ ಆಸ್ಪತ್ರೆಯೇ ತಾನೇ ಮುಕ್ಕಾಲು ಭಾಗವಾಗಿರುವುದು.

ಡಾ॥ ಹೆಚ್. ಸಿ. ಮಹಾದೇವಪ್ಪ : ಸರಿ ಇದೆ. ಜಿಲ್ಲಾ ಪರಿಷತ್ತಿನಿಂದ ಮಾಡಿದ್ದಾರೆ. ನಾವು ಕೆ. ಹೆಚ್. ಎಸ್. ಡಿ. ಪಿ. ಬಂದ ಮೇಲೆ.....

ಅಧ್ಯಕ್ಷರು : ಈ ಉತ್ತರ ಇನ್‌ಕರೆಕ್ಟ್ ಅಲ್ಲವೇ?

ಡಾ॥ ಹೆಚ್. ಸಿ. ಮಹಾದೇವಪ್ಪ : ಸಭಾಧ್ಯಕ್ಷರೇ, Whatever answer is given it is correct because it is not taken up under KHSDP. ಅದನ್ನು ಮೊದಲು ಮಾಡಿದ್ದರು. ಈಗ ನಾವು ಕೆ. ಹೆಚ್. ಎಸ್. ಟಿ. ಪಿ. ಯಿಂದ ಪ್ರಾವಿಷನ್ ಮಾಡಿ ಏನು ಖರ್ಚಾಗಿದೆ, ಅದನ್ನು ರೀ ಇಂಬರ್ಸ್ ಮಾಡಿ ಅದನ್ನು ಸರ್ಕಾರಕ್ಕೆ ಮಾಡಿಕೊಂಡು ಮತ್ತೆ ಉಳಿದ ಹಣವನ್ನು ಇಲ್ಲಿಗೆ ಖರ್ಚು ಮಾಡಿ ಮೂರು - ನಾಲ್ಕು ತಿಂಗಳಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ಈ ಆಸ್ಪತ್ರೆ ಆಗುತ್ತದೆಯೇ?

ಅಧ್ಯಕ್ಷರು: ಮಾನ್ಯ ಸದಸ್ಯರು ದಿಗ್ಭ್ರಾಂತರಾಗಬೇಕಾಗಿಲ್ಲ. ನೀವು ಭಾವ ಪರವಶರಾಗಬೇಕಾಗಿಲ್ಲ. ನಿಮ್ಮ ಆಸ್ಪತ್ರೆ ಆಗುತ್ತದೆ.

ಡಾ॥ ಹೆಚ್.ಸಿ. ಮಹಾದೇವಪ್ಪ : ಬೇರೆ ಯಾರಿಗೋ ಕೊಡುವುದಾಗಲಿ ಅಥವಾ ಜಿಲ್ಲಾ ಪರಿಷತ್ತಿನಿಂದ ಕಟ್ಟಲಿಕ್ಕೆ ಕೆ. ಹೆಚ್.ಎಸ್.ಪಿ. ಯಿಂದ ಅವಕಾಶ ಇಲ್ಲ. ಇಂಟರ್‌ನ್ಯಾಷನಲ್ ಬಿಡ್ ಮುಖಾಂತರ ನಾವೇ ಮಾಡುವುದರಿಂದ ಈಗ ಅದು ಡೂಪ್ಲಿಕೇಷನ್ ಆಗಬಾರದು ಎಂದು ಹೇಳಿ ಸ್ಥಗಿತಗೊಳಿಸಿದ್ದಾರೆ. ಉಳಿದ ಕೆಲಸವನ್ನು ಮೂರು - ನಾಲ್ಕು ತಿಂಗಳಲ್ಲಿ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ಇದು ಆಗುವುದಿಲ್ಲ. ಮೂರು - ನಾಲ್ಕು ತಿಂಗಳೆಂದರೆ ಆಗುವುದಿಲ್ಲ. ಇನ್ನು ಎರಡು ತಿಂಗಳೇ ಇರುವುದು. ಮತ್ತೆ ಮಳೆ ಹಿಡಿಯುತ್ತದೆ.

ಧಾರವಾಡ ಜಿಲ್ಲೆಯಲ್ಲಿನ ಕುಂದಗೋಳ ತಾಲ್ಲೂಕಿನ ಜಾಕಲಬ್ಬಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು

113 (344) ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಜಾಕಲಬ್ಬಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಹುಬ್ಬಳ್ಳಿ ನಗರದಿಂದ ಟ್ಯಾಂಕರ್‌ಗಳ ಮೂಲಕ 2-3 ದಿನಗಳಿಗೊಮ್ಮೆ ನೀರು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಟ್ಯಾಂಕರ್‌ಗಳಿಂದ ಒದಗಿಸುವ ನೀರು ಸಮಯಕ್ಕೆ ಹಾಗೂ ಸರಿಯಾಗಿ ಸಾಕಷ್ಟು ದೊರೆಯದೆ ಗ್ರಾಮದ ನಿವಾಸಿಗಳು ಕುಡಿಯುವ ನೀರಿಗಾಗಿ ಕೋಲಾಹಲವಾಗುತ್ತಿರುವ ಬಗ್ಗೆ ಸಾಕಷ್ಟು ದಿನಪತ್ರಿಕೆಗಳಲ್ಲಿ (ಸಂಯುಕ್ತ ಕರ್ನಾಟಕ ದಿನಪತ್ರಿಕೆ) ಪ್ರಕಟಣೆ ಯಾಗಿದ್ದರೂ ಸಹ ಸರ್ಕಾರದವರು ಇದುವರೆವಿಗೂ ಕುಡಿಯುವ ನೀರಿನ ಪರಿಹಾರಕ್ಕಾಗಿ ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜವಲ್ಲವೆ?

3) ಹಾಗಿದ್ದಲ್ಲಿ ಇಂತಹ ಅತಿ ದೊಡ್ಡ ಪ್ರಮಾಣದ ಕುಡಿಯುವ ನೀರಿನ ಸಮಸ್ಯೆಯನ್ನು ಇದುವರೆವಿಗೂ ಪರಿಹರಿಸದಿರುವುದರಿಂದ ಸರ್ಕಾರದವರು ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಶಾಶ್ವತ ಕುಡಿಯುವ ನೀರನ್ನು ಒದಗಿಸಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ಬಂದಿದೆ.

2) ಈ ಬಗ್ಗೆ ಜಿಲ್ಲಾಧಿಕಾರಿಗಳು, ಧಾರವಾಡ ಈಗಾಗಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದು, ಫೆಬ್ರವರಿ - 98ರ ಕೊನೆಯವಾರದಿಂದ ಟ್ಯಾಂಕರ್‌ಗಳ ಮೂಲಕ ಸಾಕಷ್ಟು ಕುಡಿಯುವ ನೀರನ್ನು ಗ್ರಾಮಸ್ಥರಿಗೆ ಒದಗಿಸಲಾಗುತ್ತಿದೆ.

3) ಈ ಗ್ರಾಮವು ಸವಳು ನೀರಿನ ವಲಯದಲ್ಲಿದ್ದು, ಗ್ರಾಮದಿಂದ 8-10 ಕಿ.ಮೀ ಪರಿಮಿತಿಯೊಳಗೆ ಸಿಹಿನೀರು ಸಿಗುವ ಸಂಭವವಿಲ್ಲದ ಕಾರಣ, ಕೊಳವೆಬಾವಿಯಿಂದ ಶಾಶ್ವತ ನೀರು ಸರಬರಾಜು ಮಾಡುವುದು ಕಾರ್ಯಸಾಧ್ಯವಿರುವುದಿಲ್ಲ. ಇಂತಹ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೆರೆಯ ಅಂಗಳ ಹೂಳನ್ನು ತೆಗೆದು ಕುಡಿಯುವ ನೀರಿನ ತೊಂದರೆ ನಿವಾರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.